**- 04 -**

**ದಿನಾಂಕ 24-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**<u>ಪಾಟೀ ಸವಾಲು</u> :- ಪ್ರತಿ**ವಾದಿ ಪರ ಶ್ರೀ ಬಿ.ಎಸ್.ಡಿ. ವಕೀಲರಿಂದ.

ನನಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆಯನ್ನು ನಾನೆ ಹುಸೇನ್ ಬೀ ವಿರುದ್ಧ ಸಲ್ಲಿಸಿರುತ್ತೇನೆ. ದಾವಾ ಜಮೀನು ನಮ್ಮ ಜಮೀನು ಎಂದು ದಾವೆ ಸಲ್ಲಿಸಿರುತ್ತೇನೆ. ದಾವಾ ಜಮೀನು ಸರ್ವೆ ನಂ.56 ಎಂದು ಇರುತ್ತದೆ. ಸರ್ವೆ ನಂ.56 ರಲ್ಲಿ ಒಟ್ಟು ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನು 01 ಎಕರೆ ಇರುತ್ತದೆ.

ನನ್ನ ತಾತನ ಹೆಸರು ಹುಸೇನ್ ಸಾಬ್ ಎಂದು ಇರುತ್ತದೆ. ನನ್ನ ತಾತ ನಾನು ಚಿಕ್ಕವಳಿರುವಾಗಲೆ ತೀರಿಕೊಂಡಿರುತ್ತಾನೆ. ಸದರಿ ನನ್ನ ತಾತ ಹುಸೇನ್ ಸಾಬನಿಗೆ ಖಾಸಿಂ ಸಾಬ್ ಜಲಾಲ್ ಸಾಬ್ ಮತ್ತು ದಾವಲ್ ಸಾಬ್ ಎಂದು 3 ಜನ ಮಕ್ಕಳು ಇರುತ್ತಾರೆ. ನನ್ನ ತಾತ ಹುಸೇನ್ ಸಾಬನಿಗೆ ಜಲ್ಲಮ್ಮ ಎಂಬ ಹೆಣ್ಣುಮಗಳು ಇದ್ದಳು. ಸದರಿ ಜಲ್ಲಮ್ಮ ಮಕ್ಕಳಾಗದೆ ಮೃತ ಪಟ್ಟಿರುತ್ತಾಳೆ. ಖಾಸಿಂ ಸಾಬ್ 15 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾಳೆ. ಸದರಿ ಖಾಸಿಂ ಸಾಬನ ಹೆಂಡತಿ ಬಾಬನ್ ಬೀ ಸಹ ಮೃತಪಟ್ಟಿರುತ್ತಾಳೆ. ಖಾಸಿಂ ಸಾಬನಿಗೆ 5 ಜನ ಮಕ್ಕಳಿರುತ್ತಾರೆ ಅವರುಗಳೆಂದರೆ ಹುಸೇನ್ ಪೀರ್, ಬಾವಾಸಾಬ್, ಖಾಜಾಸಾಬ್, ಇಮಾಮ್ ಅಲೀ ಮತ್ತು ಮೋದೀನ್ ಸಾಬ್, ಎಂದು ಇರುತ್ತಾರೆ.

ಜಲಾಲ್ ಸಾಬನಿಗೆ ನಾನು ಒಬ್ಬಳೇ ಮಗಳು ಇರುತ್ತೇನೆ. ದಾವಲ್ ಸಾಬನಿಗೆ 4 ಜನ ಗಂಡು ಮಕ್ಕಳು ಮತ್ತು ಓರ್ವ ಹೆಣ್ಣುಮಗಳು ಇದ್ದು, ಅವರುಗಳಲ್ಲಿ 3 ಜನ ಗಂಡು ಮಕ್ಕಳು ಮೃತ ಪಟ್ಟಿರುತ್ತಾರೆ. ದಾವಲ್ ಸಾಬನ ಜೀವಿತ ಮಗನ ಹೆಸರು ಅಕ್ಬರ್ ಎಂದು ಇರುತ್ತದೆ. ಮತ್ತು ದಾವಲ್ ಸಾಬನ ಹೆಣ್ಣುಮಗಳ ಹೆಸರು ಫಾತಿಮಾ ಎಂದು ಇರುತ್ತದೆ.

ನನ್ನ ತಾತ ಹುಸೇನ್ ಸಾಬನಿಗೆ 20 ಎಕರೆ ಗಿಂತ ಹೆಚ್ಚು ಜಮೀನು ಇತ್ತು. ಸದರಿ ಹುಸೇನ್ ಸಾಬನ ಎಲ್ಲ ಜಮೀನನ್ನು ಆತನ 3 ಜನ ಮಕ್ಕಳಾದ ಖಾಸಿಂ ಸಾಬ್, ಜಲಾಲ್ ಸಾಬ್ ಮತ್ತು ದಾವಲ್ ಸಾಬ್ ವಿಭಾಗ ಮಾಡಿಕೊಂಡಿರುತ್ತಾರೆ. ಜಲಾಲ್ ಸಾಬ್ ತನ್ನ ಭಾಗದ ಜಮೀನನ್ನು ಮಾರಾಟ ಮಾಡಿರುತ್ತಾನೆ. ದಾವಾಲ್ ಸಾಬ್ ಮತ್ತು ಖಾಸಿಂ ಸಾಬನ ಭಾಗಕ್ಕೆ ಬಂದ ಜಮೀನುಗಳನ್ನು ಅವರವರ ಮಕ್ಕಳು ತಮ್ಮಗಳ ಹೆಸರಿಗೆ ಮುಟೇಷನ್ ಮಾಡಿಸಿಕೊಂಡಿರುತ್ತಾರೆ.

ದಾವಲ್ ಸಾಬ್ ಮತ್ತು ಖಾಸಿಂ ಸಾಬನಿಗೆ ಬಂದ ಜಮೀನುಗಳನ್ನು ಸದರಿಯವರು ಮಾಲೀಕರು ಮತ್ತು ಕಬ್ಜೆದಾರರಾಗಿರುತ್ತಾರೆ ಅಂದರೆ ಸರಿ.

ದಾವಲ್ ಸಾಬನ ಮಗನ ಹೆಸರು ಹುಸೇನ್ ಸಾಬ್ ಎಂದು ಇರುತ್ತದೆ. ಸದರಿ ಹುಸೇನ್ ಸಾಬ್ 2-3 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ಸದರಿ ದಾವಾ ಜಮೀನು ಮೃತ ಹುಸೇನ್ ಸಾಬನ ಹೆಸರಿನಲ್ಲಿ ಇತ್ತು ಅಂದರೆ ಸಾಕ್ಷಿ ನನ್ನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ದಾವಾ ಜಮೀನು ನನ್ನ ಹೆಸರಿಗೆ ಮುಟೇಷನ್ ಆಗಿ 4-5 ವರ್ಷ ಆಗಿರುತ್ತದೆ. ಸದರಿ ದಾವಾ ಜಮೀನನ್ನು ನನ್ನ ಹೆಸರಿಗೆ ಮುಟೇಷನ್ ಆಗುವ ಪೂರ್ವದಲ್ಲಿ ದಾವಲ್ ಸಾಬ್ ಮತ್ತು ಆತನ ಮಕ್ಕಳು ಸಾಗುವಳಿ ಮಾಡುತ್ತಿದ್ದರು. ಹುಸೇನ್ ಸಾಬನ ಮರಣಾನಂತರ ಆತನ ಹೆಂಡತಿ ಹುಸೇನ್ ಬೀ ಸಾಗುವಳಿ ಮಾಡುತ್ತಿದ್ದಾಳೆ ಅಂದರೆ ಸರಿ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ನನ್ನ ವಾದ ಪತ್ರದಲ್ಲಿ ಹಿಂದೂ ಧರ್ಮದ ಕಾನೂನಿನಡಿಯಲ್ಲಿ ಕುಟುಂಬದ ಜಮೀನುಗಳನ್ನು ನಮ್ಮ ತಂದೆಯ ಜೀವಿತ ಅವಧಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನಮೂದಿಸಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿ ಹಿಂದೂ ಧರ್ಮದಂತೆ ನಮ್ಮ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಳ್ಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಮುಸ್ಲಿಂ ಧರ್ಮಕ್ಕೆ ಸೇರಿರುತ್ತೇವೆ ಅಂದರೆ ಸರಿ. ದಾವಾ ಸ್ವತ್ತು ಯಾವ ವರ್ಷದಲ್ಲಿ ಮತ್ತು ಯಾರಿಗೆ ಮುಟೇಷನ್ ಆಗಿರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಮುಟೇಷನ್ ಪ್ರತಿಗಳನ್ನು ನೋಡಿರುವುದಿಲ್ಲ.

ದಾವಾ ಆಸ್ತಿ ಖಾಸಿಂ ಸಾಬನ ಮಗ ಮೋದಿನ್ ಸಾಬನಿಂದ ಪ್ರತಿವಾದಿಯ ಗಂಡ ಹುಸೇನ್ ಸಾಬನ ಹೆಸರಿಗೆ 1995 ರಲ್ಲಿ ಮುಟೇಷನ್ ಆಗಿರುತ್ತದೆ ಅಂದರೆ ಸಾಕ್ಷಿ ಉತ್ತರ ಹೇಳದೆ ಸುಮ್ಮನೆ ಕುಳಿತಿರುತ್ತಾರೆ. ಹುಸೇನ್ ಸಾಬನ ಮರಣಾನಂತರ ಪ್ರತಿವಾದಿ ಹುಸೇನ್ ಬೀ ಹೆಸರಿಗೆ ಮುಟೇಷನ್ ಆಗಿರುತ್ತದೆ ಅಂದರೆ ಸರಿ. ಪ್ರತಿವಾದಿಯೊಂದಿಗೆ ದಾವಾ ಸ್ವತ್ತಿನ ಪಹಣಿಯಲ್ಲಿ ಕಾನೂನು ಬಾಹಿರವಾಗಿ ಪ್ರತಿವಾದಿಗೆ ತಿಳಿಯದಂತೆ ನನ್ನ ಹೆಸರನ್ನು ಸಹ ಸೇರಿಸಿಕೊಂಡಿರುತ್ತೇನೆ ಅಂದರೆ ನನ್ನ ಹೆಸರು ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಮತ್ತು ನನಗೆ ಯಾವುದೇ ರೀತಿ ಸಂಬಂಧ ಇರದೇ ಇದ್ದರು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಮುಟೇಷನ್ ಮಾಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿ ಹುಸೇನ್ ಬೀ ಮಾಲೀಕಳಾಗಿರುತ್ತಾಳೆ ಅಂದರೆ ಸರಿಯಲ್ಲ.

ಸದರಿ ನನ್ನ ಹೆಸರು ಪಹಣಿಯಿಂದ ತೆಗೆದು ಹಾಕಬೇಕು ಎಂದು ನನ್ನ ಹೆಸರಿಗೆ ಆದ ಮುಟೇಷನನ್ನು ಪ್ರಶ್ನಿಸಿ ರಾಯಚೂರು ಉಪ-ವಿಭಾಗಾಧಿಕಾರಿ ರಾಯಚೂರುನಲ್ಲಿ ಮೇಲ್ಮನವಿಯನ್ನು ಪ್ರತಿವಾದಿ ಸಲ್ಲಿಸಿದ್ದು ಅದರಲ್ಲಿ ನಾನು ಹಾಜರಾಗಿ ತಕರಾರು ಸಲ್ಲಿಸಿರುತ್ತೇನೆ ಅಂದರೆ ಸರಿ. ಸದರಿ ಉಪ-ವಿಭಾಗಾಧಿಕಾರಿಗಳು ಸಿವಿಲ್ ನ್ಯಾಯಾಲಯಕ್ಕೆ ದಾವೆ ಸಲ್ಲಿಸುವಂತೆ ಆದೇಶ ಮಾಡಿರುತ್ತಾರೆ ಅಂದರೆ ಸರಿ.

ಖಾಸಿಂ ಸಾಬನ ಮಗ ಮೊದಿನ್ ಸಾಬನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಹುಸೇನ್ ಸಾಬನಿಗೆ ದಾವಾ ಆಸ್ತಿ ಮುಟೇಷನ್ ಆಗಿರುವುದು ಈಗ 10-15 ವರ್ಷಗಳಿಂದ ನನಗೆ ಗೊತ್ತಿರುತ್ತದೆ. ಸದರಿ ಮುಟೇಷನ್ ಕುರಿತು ನನಗೆ ತಿಳಿದ ನಂತರ ಈ ದಾವೆ ಸಲ್ಲಿಸುವ ವರೆಗೆ ಯಾವುದೇ ಮೇಲ್ಮನವಿ ನಾನು ಮಾಡಿರುವುದಿಲ್ಲ.

ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.